# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ–೪ಎ<br>**Part – IVA** | ಬೆಂಗಳೂರು, ಬುಧವಾರ, ೧೦, ಡಿಸೆಂಬರ್,೨೦೨೫ ( ಮಾರ್ಗಶಿರಾ,೧೯, ಶಕವರ್ಷ, ೧೯೪೭)<br>**BENGALURU, WEDNESDAY, 10, DECEMBER, 2025 (MARGASHIRA, 19, SHAKAVARSHA, 1947)** | ನಂ.೭೯೯<br>**No. 799** |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಎಂಟನೇ ಅಧಿವೇಶನ**

## ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–72)**

ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ 46)ನ್ನು, ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರುವುದಾಗಿ ಭಾವಿಸತಕ್ಕದ್ದು.

**2. ಪ್ರಕರಣ 11ರ ತಿದ್ದುಪಡಿ.-** ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ 46) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 11ನೇ ಪ್ರಕರಣದಲ್ಲಿ,-

(i) ಪ್ರಕರಣದ ಶಿರೋನಾಮೆಯಲ್ಲಿನ, "**ಉದ್ಯೋಗದಾತನ ಕರ್ತವ್ಯಗಳು.-**" ಎಂಬ ಪದಗಳಿಗೆ ಬದಲಾಗಿ "**ಸಂಸ್ಥೆಯ ಮಾಲೀಕನ ಕರ್ತವ್ಯಗಳು.-**" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii)ಹಾಗೇ, ಪ್ರತಿಯೋಜಿಸಲಾದ "ಸಂಸ್ಥೆಯ ಮಾಲೀಕನ ಕರ್ತವ್ಯಗಳು" ಶಿರೋನಾಮೆಯಡಿಯಲ್ಲಿನ "ಪ್ರತಿಯೊಬ್ಬ ಉದ್ಯೋಗದಾತನು" ಎಂಬ ಪದಗಳ ಬದಲಾಗಿ "ಪ್ರತಿಯೊಬ್ಬ ಸಂಸ್ಥೆಯ ಮಾಲೀಕನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iii) ಖಂಡ (ಬಿ)ರಲ್ಲಿ, "ಪ್ರತಿ ತಿಂಗಳ ಹತ್ತನೇ ದಿನಾಂಕದೊಳಗೆ" ಎಂಬ ಪದಗಳಿಗೆ ಬದಲಾಗಿ "ಮುಂಬರುವ ತಿಂಗಳ ಹತ್ತನೇ ದಿನಾಂಕದೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. ಪ್ರಕರಣ 18ನ್ನು ಬಿಟ್ಟುಬಿಡುವುದು.-** ಮೂಲ ಅಧಿನಿಯಮದಲ್ಲಿನ 18ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ, 2024 (2024ರ ಕರ್ನಾಟಕ ಅಧಿನಿಯಮ 46)ನ್ನು,-

(i) ಉದ್ಯೋಗದಾತ ಎಂಬ ಪದದ ಬದಲಾಗಿ ಸಂಸ್ಥೆಯ ಮಾಲೀಕನು ಎಂಬ ಪದಗಳನ್ನು ಬಳಸಲು,; ಮತ್ತು

(ii) ಅಪರಾಧಗಳ ರಾಜಿಗೆ ಸಂಬಂಧಿಸಿದ ಉಪಬಂಧಗಳನ್ನು ಬಿಟ್ಟುಬಿಡಲು;

-ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಸಂತೋಷ್ ಎಸ್ ಲಾಡ್**
ಕಾರ್ಮಿಕ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

# ಅನುಬಂಧ

## ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ವಿಧೇಯಕ, 2024ರ (2024ರ ಕರ್ನಾಟಕ ಅಧಿನಿಯಮ ಸಂಖ್ಯೆ 46) ಉದ್ಧೃತ ಭಾಗ

**XXX XXX XXX**

**11. ಉದ್ಯೋಗದಾತನ ಕರ್ತವ್ಯಗಳು.-** ಪ್ರತಿಯೊಬ್ಬ ಉದ್ಯೋಗದಾತನು,-

(ಎ) ಪ್ರತಿ ಕ್ಯಾಲೆಂಡರ್ ತಿಂಗಳು ಹತ್ತನೇ ದಿನಾಂಕದೊಳಗೆ 9ನೇ ಪ್ರಕರಣದ ಅನುಸಾರ ವಿಧಿಸಲಾದ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ ಉಪಕರದ ಮೊತ್ತವನ್ನು ಠೇವಣಿ ಮಾಡುವುದು; ಮತ್ತು

(ಬಿ) ಈ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಿದ ಆನ್‌ಲೈನ್ ಅಥವಾ ವೆಬ್ ಪೋರ್ಟಲ್‌ನಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಅರ್ಧವಾರ್ಷಿಕವಾಗಿ ವಿವರ ಪಟ್ಟಿಕೆಯನ್ನು ಸಲ್ಲಿಸುವುದು, ನಿಯಮಿಸಬಹುದಾದಂತೆ ಎಲ್ಲಾ ಮಾಹಿತಿಯನ್ನು ಒಳಗೊಂಡ ಪ್ರತಿ ತಿಂಗಳ ಹತ್ತನೇ ದಿನಾಂಕದೊಳಗೆ ನಿಯಮಿಸಲಾದಂಥ ನಮೂನೆಯಲ್ಲಿ ಮಾಸಿಕ ವಿವರಪಟ್ಟಿಯನ್ನು ಸಲ್ಲಿಸುವುದು,

- ಅಗತ್ಯವಾಗಿರತಕ್ಕದ್ದು.

**XXX XXX XXX**

**18. ಅಪರಾಧಗಳ ರಾಜಿ.-** (1) ಈ ಅಧಿನಿಯಮದಡಿಯಲ್ಲಿನ ಯಾವುದೇ ದಂಡನೀಯ ಅಪರಾಧವನ್ನು ಅಭಿಯೋಜನೆಯನ್ನು ಪ್ರಾರಂಭಿಸುವ ಮೊದಲು ಅಥವಾ ತರುವಾಯ, ಈ ಕುರಿತು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗಳು ಅಥವಾ ಪ್ರಾಧಿಕಾರಗಳ ಮೂಲಕ ಮತ್ತು ಅಂಥ ಮೊತ್ತಕ್ಕಾಗಿ ರಾಜಿಯನ್ನು ಮಾಡಿಕೊಳ್ಳಬಹುದು:

ಪರಂತು, ಅಂಥ ರಾಜಿ ಮೊತ್ತವನ್ನು ಈ ಅಧಿನಿಯಮದ 8ನೇ ಪ್ರಕರಣದಡಿ ಸ್ಥಾಪಿಸಲಾದ ನಿಧಿಗೆ ಜಮೆ ಮಾಡತಕ್ಕದ್ದು.

(2) ಉಪಪ್ರಕರಣ (1)ರಲ್ಲಿರುವುದಾವುದೂ, ಒಬ್ಬ ವ್ಯಕ್ತಿಯು ಎರಡನೇ ಬಾರಿ ಅಥವಾ ತರುವಾಯದ ದಿನಾಂಕದಿಂದ ಮೂರು ವರ್ಷದ ಅವಧಿಯೊಳಗಾಗಿ,-

(ಎ) ಮೊದಲೇ ರಾಜಿಮಾಡಿಕೊಂಡ ಅಂಥದ್ದೇ ಅಪರಾಧವನ್ನು ಎಸಗಿದರೆ;

(ಬಿ) ಮೊದಲೇ ಅಪರಾಧ ನಿರ್ಣಿತನಾದಂಥ ವ್ಯಕ್ತಿಯು ಅಂಥದ್ದೇ ಅಪರಾಧವನ್ನು ಎಸಗಿದರೆ,

-ನಂತರ ಎಸಗಲಾದ ಅಪರಾಧಕ್ಕೆ ಅನ್ವಯವಾಗತಕ್ಕದ್ದಲ್ಲ.

(3) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಪ್ರತಿಯೊಬ್ಬ ಅಧಿಕಾರಿಯು, ರಾಜ್ಯ ಸರ್ಕಾರದ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು ಅಪರಾಧದ ರಾಜಿಗಾಗಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(4) ಅಪರಾಧದ ರಾಜಿಗಾಗಿನ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಸಲ್ಲಿಸತಕ್ಕದ್ದು.

(5) ಯಾವುದೇ ಅಭಿಯೋಜನೆಯನ್ನು ಪ್ರಾರಂಭಿಸುವ ಮೊದಲು ಯಾವುದೇ ಅಪರಾಧದ ರಾಜಿಯನ್ನು ಮಾಡಿಕೊಂಡರೆ, ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ಹಾಗೆ ಅಪರಾಧದ ರಾಜಿಯನ್ನು ಮಾಡಿಕೊಂಡ ಅಪರಾಧಿಯ ವಿರುದ್ಧ ಯಾವುದೇ ಅಭಿಯೋಜನೆಯನ್ನು ಪ್ರಾರಂಭಿಸತಕ್ಕದ್ದಲ್ಲ.

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**EIGHTH SESSION**

# THE KARNATAKA CINE AND CULTURAL ACTIVISTS (WELFARE) (AMENDMENT) BILL, 2025

## (LA Bill No. 72 of 2025)

A Bill to amend the Karnataka Cine and Cultural Activists (Welfare) Act, 2024.

Whereas it is expedient to amend the Karnataka Cine and Cultural Activists (Welfare) Act, 2024(Karnataka Act 46 of 2024)for the purposes hereinafter appearing;

Be it enacted by the Karnataka State Legislature in the seventy sixth year of the Republic of India, as follows:-

**1. Short title and commencement.-** (1) This Act may be called the Karnataka Cine and Cultural Activists (Welfare) (Amendment) Act, 2025.

(2) It shall come into force at once.

**2. Amendment of section 11.-** In the Karnataka Cine and Cultural Activists (Welfare) Act, 2024(Karnataka Act 46 of 2024) (hereinafter referred to as the Principal Act), in section 11,-

(i) for the heading **"Duties of employer.-"**,the heading "**Duties of the establishment owner.-"**shall be substituted;

(ii) under the heading **"Duties of the establishment owner"** as so substituted, for the words "every employer", the words "every establishment owner", shall be substituted; and

(iii) in clause (b), for the words "tenth day of the month", the words "tenth day of the succeeding month", shall be substituted.

**3. Omission of section 18.-** In the Principal Act, section 18 shall be omitted.

**STATEMENT OF OBJECTS AND REASONS**

It is considered necessary to amend the Karnataka Cine and Cultural Activists (Welfare) Act, 2024 (Karnataka Act 46 of 2024) to,-

(i) use the word establishment owner instead of employer; and

(ii) omit the provisions relating to compounding of offences.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**SANTOSH S LAD**
MINISTER FOR LABOUR

**M.K. VISHALAKSHI**
Secretary
Karnataka Legislative Assembly

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



## ANNEXURE

### Extract from the Karnataka Cine and Cultural Activists (Welfare) Act, 2024 (Karnataka Act 46 of 2024)

**XXX XXX XXX**

**11. Duties of employer.-** Every employer shall be required to,-

(a) deposit the amount of Cine and Cultural Activists welfare cess levied as per section 9 by tenth day of each calendar month; and

(b) submit half yearly return in such form as may be prescribed, by tenth day of month including all information as may be prescribed, through online or web portal designed for this purpose.

**XXX XXX XXX**

**18. Compounding of offences.-** (1) Any offence punishable under this Act may either before or after the institution of prosecution, be compounded by such officers or authorities and for such amount as the State Government may, by notification in the Gazette, specify in the behalf: Provided that, such amount of composition shall be credited to the Fund established under section 8 of this Act.

(2) Nothing contained in sub-section (1) shall apply to an offence committed by a person for the second time or thereafter within a period of three years from the date-10 (a) of commission of a similar offence which was earlier compounded; (b) of commission of a similar offence for which such person was earlier convicted.

(3) Every officer referred to in sub-section (1) shall exercise the powers to compound an offence, subject to the direction, control and supervision of the State Government.

(4) Every application for the compounding of an offence shall be made in such manner as may be prescribed.

(5) Where any offence is compounded before the institution of any prosecution, no prosecution shall be instituted in relation to such offence, against the offender in relation to whom the offence is so compounded.

**XXX XXX XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH